# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು :** ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು)

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :** 488

**ಉತ್ತರಿಸಬೇಕಾದ ದಿನಾಂಕ :** 11-12-2025

**ಉತ್ತರಿಸಬೇಕಾದ ಸಚಿವರು :** ಸನ್ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಹುದ್ದೆಯ ನೇಮಕಾತಿಗೆ ಇರುವ ನಿಯಮಾವಳಿಗಳು ಏನು; ಇವರ ನೇಮಕಕ್ಕೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಸಹಕಾರ ಸಂಘಗಳ ನಿಬಂಧಕರ ಅನುಮೋದನೆ ಬೇಕಾಗಿರುತ್ತದೆಯೇ; | ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿ.ಇ.ಒ) ನೇಮಕವನ್ನು ದಿನಾಂಕ:03-12-2019 ರ ಆರ್.ಬಿ.ಐ. ನಿರ್ವಹಣಾ ಮಂಡಳಿಯ ಸುತ್ತೋಲೆಯಂತೆ ನಿಯಂತ್ರಿಸಬೇಕೆಂದು ಪ್ರಸ್ತಾಪಿಸಲಾಗಿತ್ತು. ಆದಾಗ್ಯೂ ಈ ಸುತ್ತೋಲೆಗೆ ಗೌ\|\| ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದು, ಈ ಸುತ್ತೋಲೆ ಪ್ರಸ್ತುತ ಜಾರಿಯಲ್ಲಿರುವುದಿಲ್ಲ.<br><br>ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ನಿಯಮ 17 ರನ್ವಯ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಹುದ್ದೆಯ ನೇಮಕಾತಿಗೆ ಕ್ರಮವಿಡಲು ಅವಕಾಶವಿದ್ದು, ಸಹಕಾರ ಸಂಘಗಳ ನಿಬಂಧಕರಿಂದ ಅನುಮತಿ ಪಡೆದು ನೇಮಕಾತಿ ಪ್ರಕ್ರಿಯೆಗಳನ್ನು ನಿಯಮಗಳನುಸಾರ ಜರುಗಿಸಬೇಕಾಗಿರುತ್ತದೆ. |
| ಆ) | ಬೆಂಗಳೂರು ನಗರದಲ್ಲಿರುವ ನ್ಯಾಯಮಿತ್ರ ಸಹಕಾರ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ (ಸಿಇಒ) ಹುದ್ದೆಯನ್ನು ತುಂಬಲು ಇಲಾಖೆಯ ಮತ್ತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಅನುಮೋದನೆ ಪಡೆಯಲಾಗಿದೆಯೇ; ಪಡೆದಿದ್ದಲ್ಲಿ, ಅದರ ವಿವರಗಳನ್ನು ನೀಡುವುದು; | ನ್ಯಾಯಮಿತ್ರ ಸಹಕಾರ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ (ಸಿಇಒ) ಹುದ್ದೆಯನ್ನೊಳಗೊಂಡಂತೆ ವ್ಯವಸ್ಥಾಪಕರು, ಅಕೌಂಟೆಂಟ್, ಸೀನಿಯರ್ ಅಸಿಸ್ಟೆಂಟ್, ಅಟೆಂಡರ್ ಮತ್ತು ಜವಾನ ಹುದ್ದೆಗಳ ನೇಮಕಾತಿಗೆ ಸಹಕಾರ ಇಲಾಖೆಯಿಂದ ಅನುಮೋದನೆ ಪಡೆಯಲಾಗಿರುತ್ತದೆ ಎಂದು ಬ್ಯಾಂಕಿನವರು ತಿಳಿಸಿರುತ್ತಾರೆ. |
| ಇ) | ಬೆಂಗಳೂರು ನ್ಯಾಯಮಿತ್ರ ಸಹಕಾರ ಬ್ಯಾಂಕಿನ ಸಿಇಒ ಅವರು ಯಾವಾಗ ಬ್ಯಾಂಕಿನ ನೌಕರರಾಗಿ ನೇಮಕವಾದರು; ಇವರ ನೇಮಕಾತಿಗೆ ಯಾವಾಗ ಇಲಾಖೆ ಅನುಮೋದನೆ ನೀಡಿರುತ್ತದೆ. ಇವರ ಪದೋನ್ನತಿಗೆ ಇಲಾಖಾ ಅನುಮೋದನೆ ಪಡೆಯಲಾಗಿದೆಯೇ?; | ಬ್ಯಾಂಕಿನ ದಿನಾಂಕ:25-01-2012ರ ಆಡಳಿತ ಮಂಡಳಿ ನಿರ್ಣಯದಂತೆ ಪ್ರಸ್ತುತ ಇರುವ ಅಧಿಕಾರಿಯನ್ನು ವ್ಯವಸ್ಥಾಪಕರಾಗಿ ನೇಮಿಸಲಾಗಿರುತ್ತದೆ. ತರುವಾಯ ಅರ್ಹತೆ ಮತ್ತು ಕಾರ್ಯಕ್ಷಮತೆಯ ಆಧಾರದ ಮೇಲೆ ಹಾಗೂ ಬ್ಯಾಂಕಿನ ಆಡಳಿತ ಮಂಡಲಿಯ ತೀರ್ಮಾನದಂತೆ ದಿನಾಂಕ: 01-11-2023 ರಂದು ಸಿ.ಇ.ಒ. ಆಗಿ ಪದೋನ್ನತಿ ನೀಡಲಾಗಿರುತ್ತದೆ ಎಂದು ಬ್ಯಾಂಕಿನವರು ತಿಳಿಸಿರುತ್ತಾರೆ. |

| | | |
|---|---|---|
| ಈ) | ಈಗಿನ ಸಿಇಒ ಕೋವಿಡ್ ಸಂದರ್ಭದಲ್ಲಿ ನಿಯಮಾವಳಿ ಉಲ್ಲಂಘಿಸಿ ವಾರ್ಷಿಕ ಶೇ. ಒಂದರ ಬಡ್ಡಿದರದಲ್ಲಿ ಕಾನೂನು ಬಾಹಿರವಾಗಿ ಹೆಚ್ಚುವರಿ ಸಾಲ ನೀಡಿರುವ ಆರೋಪ ಇವರ ಮೇಲೆ ಇದೆಯೇ; ಇದ್ದಲ್ಲಿ ಯಾವ ಶಿಸ್ತುಕ್ರಮ ಕೈಗೊಳ್ಳಲಾಗಿರುತ್ತದೆ; ಇಲಾಖಾ ವಿಚಾರಣೆ ಮಾಡಲಾಗಿದೆಯೇ? | ಈ ಬಗ್ಗೆ ಬ್ಯಾಂಕಿನ ಅಧ್ಯಕ್ಷರು ಉತ್ತರಿಸಿ, ಬ್ಯಾಂಕು ಕೋವಿಡ್-19 ಸಂದರ್ಭದಲ್ಲಿ ದಿನಾಂಕ:30-11-2020 (ವಿಷಯ ಸಂಖ್ಯೆ:03) ರ ತೀರ್ಮಾನದಂತೆ ತುರ್ತು ಪರಿಹಾರ ಸಾಲಗಳನ್ನು ನೀಡಿದ್ದು, ಬ್ಯಾಂಕಿನ ಅನುಮೋದಿತ ಸಾಲಗಳ ನಿಯಮಾವಳಿಗಳ ರೀತ್ಯಾ ಸಿ.ಇ.ಒ. ಬ್ಯಾಂಕಿನ ಅಧ್ಯಕ್ಷರಿಂದ ಪೂರ್ವಾನುಮತಿ ಪಡೆದ ನಂತರವೇ ಸಾಲಗಳನ್ನು ವಿತರಿಸಲಾಗಿದ್ದು, ಎಲ್ಲಾ ಕೋವಿಡ್-19 ಸಂದರ್ಭದ ಸಾಲಗಳನ್ನು ನಂತರ ನಡೆದ ಮುಂದಿನ ಸಭೆಯಲ್ಲಿ ಮಂಡಳಿಯು ಅನುಮೋದಿಸಲಾಗಿರುತ್ತದೆ.<br><br>ಬ್ಯಾಂಕು ಕೋವಿಡ್-19 ಸಂದರ್ಭದಲ್ಲಿ ಒಟ್ಟು ರೂ. 16,01,405/-ಗಳ ಸಾಲವನ್ನು ವಿತರಿಸಿದ್ದು, ಈ ಸಾಲಗಳನ್ನು ಬಡ್ಡಿ ಸಮೇತ ಮುಂದಿನ 9 ತಿಂಗಳಿನಲ್ಲಿ ಪೂರ್ಣ ಪ್ರಮಾಣದಲ್ಲಿ ವಸೂಲು ಮಾಡಲಾಗಿರುತ್ತದೆ. ಇದರಿಂದ ಬ್ಯಾಂಕಿಗೆ ಆರ್ಥಿಕವಾಗಿ ಅನುಕೂಲವಾಗಿರುತ್ತದೆ. ಹಾಗೂ ಇದರಲ್ಲಿ ಯಾವುದೇ ಅಕ್ರಮ ಮತ್ತು ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ.<br><br>ಆದ್ದರಿಂದ ಬ್ಯಾಂಕಿನ ಸಿ.ಇ.ಒ. ವಿರುದ್ಧ ಯಾವುದೇ ಶಿಸ್ತು ಕ್ರಮ ಅಥವಾ ಇಲಾಖೆ ವಿಚಾರಣೆ ಜರುಗಿಸಿರುವುದಿಲ್ಲ ಎಂದು ಬ್ಯಾಂಕಿನವರು ತಿಳಿಸಿರುತ್ತಾರೆ. ಆದರೆ ಬ್ಯಾಂಕಿನ ದಿನಾಂಕ: 28-07-2025ರ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ:5 ರಲ್ಲಿ ದಾಖಲಾಗಿರುವ ತೀರ್ಮಾನದ ಸಂಬಂಧ ಪ್ರಧಾನ ವ್ಯವಸ್ಥಾಪಕರ ವಿರುದ್ಧ ಕೈಗೊಂಡಿರುವ ಕ್ರಮದ ಮಾಹಿತಿಯನ್ನು ನೀಡಲು ಬ್ಯಾಂಕಿಗೆ ಪತ್ರ ಬರೆಯಲಾಗಿರುತ್ತದೆ. |

**ಸಂಖ್ಯೆ: ಸಿಒ 218 ಸಿಸಿಬಿ 2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ